








ಈ ಎಲ್ಲ ಐಎಲ್‌ಆರ್ ಪುಸ್ತಕಗಳನ್ನು ನೀಲಿ ಸರಣಿಯಲ್ಲಿ ಸಂಗ್ರಹಿಸಿ ಮತ್ತು ಓದಿ






























FOR OUR BOOKS

www.books.katha.org

www.books.katha.org

ಮಕ್ಕಳಿಗಾಗಿ
ಒಂದು ಕಥಾ ಪುಸ್ತಕ
ISBN 978-93-94185-93-7
9 789394 185937
books.katha.org
₹ 135/-

ಕಥಾದಿಂದ ಒಂದು 300ಎಂ ಥಿಂಕ್‌ಬುಕ್

ಕುಟ್ಟನ್ ಬೆಕ್ಕಿನ ಮರಿ ತಾನು ಈಗ ಬೆಳೆದಿದ್ದೇನೆ ಎಂದು ಭಾವಿಸುತ್ತದೆ. ಪ್ರಶ್ನೆಗಳಿಂದ ಅವನನ್ನು ಪೀಡಿಸುವ ತನ್ನ ಗದ್ದಲದ ಚಿಕ್ಕ ಸೋದರನನ್ನು ನಿಭಾಯಿಸಲು ಅವನು ಸಮರ್ಥನಾಗಿದ್ದಾನೆಯೇ ಎಂದು ಈ ಕಥೆಯಲ್ಲಿ ಕಂಡುಹಿಡಿಯಿರಿ.

KATHA

ಕಥಾ ಸಂಸ್ಥೆಯನ್ನು 1988 ರಲ್ಲಿ ಗುಣಮಟ್ಟದ ಶಿಕ್ಷಣ ಮತ್ತು ಮಕ್ಕಳ ಬಡತನದ ಸವಾಲುಗಳನ್ನು ನಿಭಾಯಿಸಲು ಸ್ಥಾಪಿಸಲಾಯಿತು. ಕಥಾ ಮೂರು ಪ್ರಭಾವದ ಕೇಂದ್ರಗಳನ್ನು ಹೊಂದಿದೆ - ಕಥೆ ಸಂಶೋಧನೆ ಮತ್ತು ಸಂಪನ್ಮೂಲ ಕೇಂದ್ರ (ಕಥಾ ವಿಲಾಸಂ), ಸುಸ್ಥಿರ ಕಲಿಕೆಯ ಕೇಂದ್ರ (ಕಲ್ಪವೃಕ್ಷಂ) ಮತ್ತು ಕಥಾ ಆದಿವಾಸಿ ಮತ್ತು ದಲಿತ ಲರ್ನಿಂಗ್ ಲ್ಯಾಬ್ (KADL) ನಾವೀನ್ಯತೆ ಕೇಂದ್ರ. ಕಥಾ ಅವರ 300 ಮಿಲಿಯನ್ ಸಿಟಿಜನ್ಸ್ ಚಾಲೆಂಜ್ ಈ ಮೂರು ಕೇಂದ್ರಗಳ ಬಲವನ್ನು ಸಹಯೋಗದೊಂದಿಗೆ, ಸಮರ್ಥನೀಯವಾಗಿ ಮತ್ತು ವಿಶ್ವದ ಅತಿದೊಡ್ಡ ಯುವ ಜನಸಂಖ್ಯೆಯ ಜೀವನದ ಮೇಲೆ ಪ್ರಭಾವ ಬೀರಲು ಸಂಯೋಜಿಸುತ್ತದೆ.

"ಇದು ಭಾರತದ ಕಿರೀಟದಲ್ಲಿ ಒಂದು ಶೈಕ್ಷಣಿಕ ಆಭರಣ." - ನೌಯುಕಿ ಶಿನೋಹರಾ, ಉಪ ವ್ಯವಸ್ಥಾಪಕ ನಿರ್ದೇಶಕ, ಅಂತಾರಾಷ್ಟ್ರೀಯ ಹಣಕಾಸು ನಿಧಿ

"[ಕಥಾ]...ಭಾರತೀಯ ಪ್ರಕಾಶನ ಇತಿಹಾಸದಲ್ಲಿ ಒಂದು ವಿಶೇಷ ಮತ್ತು ಅನನ್ಯ ಕ್ಷಣ." - ಎಕನಾಮಿಕ್ ಟೈಮ್ಸ್

“ಕಥಾ ಸಂಸ್ಥೆಯು ಮಕ್ಕಳಿಗಾಗಿ ನಿಜವಾದ ವಾತ್ಸಲ್ಯವನ್ನು ಹೊಂದಿದೆ. ಅದಕ್ಕಾಗಿಯೇ ... ಮಕ್ಕಳಿಗಾಗಿ ಅಂತಹ ಬಹುಕಾಂತೀಯ ಚಿತ್ರ ಪುಸ್ತಕಗಳನ್ನು ರಚಿಸಿದೆ. - ಟೈಮ್ ಔಟ್

"ಕಥಾ ಸಂಸ್ಥೆಯ ಕೆಲಸವು, ಮಕ್ಕಳು [ಅವರ ಪುಸ್ತಕಗಳಲ್ಲಿ] ಮಾಡುವಂತೆಯೇ ತಮ್ಮ ಸಮುದಾಯಗಳಿಗೆ ಸಮರ್ಥನೀಯ ಮತ್ತು ನೈಜವಾದ ಬದಲಾವಣೆಯನ್ನು ತರಬಹುದು ಎಂಬ ಉದ್ದೇಶದಿಂದ ನಡೆಸಲ್ಪಡುತ್ತದೆ." - ಪೇಪರ್ಟೈಗರ್ಸ್

# ಕುಟ್ಟನ್‌ಗೆ ಖುಷಿ ಸಿಕ್ಕಿತು

ರಚನೆ: ಸಿರೀನ್ ಕಾಸಿಮ್
ಕಲೆ: ಸೋನಲ್ ಪಾನ್ಸೆ

KATHA
ದೆಹಲಿ | ಚೆನ್ನೈ | ಬೆಂಗಳೂರು





ಮಧ್ಯಾಹ್ನದ ದೀರ್ಘ ನಿದ್ದೆ ಮುಗಿಸಿ ಕುಟ್ಟನ್ ಎದ್ದ. ಅವನ ಕುಟುಂಬದ ಮೂರು ಪುಟ್ಟ ಮರಿಗಳು ಸಂಭ್ರಮದಿಂದ ಪುಟಪುಟನೆ ಓಡಾಡುತ್ತಿದ್ದವು.

ಕುತೂಹಲ ಹುಟ್ಟಿಸುವಂಥದ್ದು ಏನೋ ಇರಲೇಬೇಕು. ಈ ಪುಟ್ಟ ಮರಿಗಳಿಗಂತೂ ಕುತೂಹಲ ಇದ್ದೇ ಇರಬೇಕು. ಅವು ತೀರಾ ಚಿಕ್ಕವು. ಕುಟ್ಟನ್ ಸ್ವಲ್ಪ ದೊಡ್ಡವನಾಗಿದ್ದ. ತಾನು ದೊಡ್ಡವನಾಗಿದ್ದೇನೆ ಅಂತ ಅವನಿಗೆ ಅನ್ನಿಸುತ್ತಿತ್ತು,

**ಬಹಳ ದೊಡ್ಡವನು!**



ಅವನು ಸೋಮಾರಿತನದಿಂದ ಮೈಮುರಿದು, ದೇಹವನ್ನೆಲ್ಲ ಒಮ್ಮೆ ಒದರಿ, ತೀರಾ ದೊಡ್ಡವನಾದಂತೆ ಯೋಚಿಸುತ್ತಾ ಪುಟ್ಟ ಮರಿಗಳ ಕಡೆಗೆ ರಾಜನಂತೆ ನಿಧಾನವಾಗಿ ನಡೆದನು.

ಅಷ್ಟರಲ್ಲಿ ಹಸಿರು ಎಲೆಗಳ ನಡುವೆ ಹೊಳೆಯುತ್ತಿದ್ದ ಹಳದಿ ಬಣ್ಣದ ಯಾವುದೋ ವಸ್ತು ಅವನ ಕಣ್ಣಿಗೆ ಬಿತ್ತು. ಇವತ್ತು ಬೆಳಗ್ಗೆ ಅವನು ನಿದ್ದೆ ಮಾಡಿದಾಗ ಅದು ಅಲ್ಲಿ ಇರಲಿಲ್ಲ.

ಒಂದು ಪುಟ್ಟ ಮರಿ ಗಾಬರಿಯ ಧ್ವನಿಯಲ್ಲಿ ಅವನನ್ನು ಕೇಳಿತು, “ಏನಿದು? ಇಂಥದ್ದನ್ನು ಯಾವತ್ತೂ ನಾವು ನೋಡಿಲ್ಲ!”


ಕುಟ್ಟನ್ ತನಗೆ ಎಲ್ಲ ಗೊತ್ತಿದೆ ಎನ್ನುವ ಗತ್ತಿನಲ್ಲಿ ನಗುತ್ತ, ಗಂಟಲನ್ನು ಸರಿಪಡಿಸಿಕೊಂಡನು,
"ಮಿಂಯಾಂವ್ ವ್ ವ್.
ಖಂಡಿತ, ನನಗೆ ಗೊತ್ತು! ಇದೂ ಒಂದು ಪ್ರಶ್ನೆಯೇ?"



ಕಳೆದ ವರ್ಷ ಅವನು ಅದನ್ನೇ ನೋಡಿದ್ದ. ಅದು ಏನು ಎನ್ನುವುದನ್ನು ಅವನ ಅಮ್ಮ ವಿವರಿಸಿದ್ದಳು. ಆದರೆ ಅವನು ಎಲ್ಲವನ್ನೂ ಮರೆತಿದ್ದನು.

**ಎಂಥಾ ದಡ್ಡ!**

ಈಗ ನಾನು ಅವರಿಗೆ ಏನು ಹೇಳಲಿ - ನನಗೆ ಗೊತ್ತಿಲ್ಲ ಅಂತಲಾ? ಸಾಧ್ಯವೇ ಇಲ್ಲ! ನನಗೆ ಗೊತ್ತಿಲ್ಲ ಎನ್ನುವುದು ಈ ಮರಿಗಳಿಗೆ ಗೊತ್ತಾಗುವಂತೆಯೇ ಇಲ್ಲ!



ಕಳೆದ ಸಲ, ಆ ಹೆಂಗಸು ನೆಲವನ್ನು ಅಗೆದು, ಅದರಲ್ಲಿ ನೀರು ಹಾಕಿ ಅದರ ಮೇಲೆ ಬಲೆ ಹಾಕಿದ್ದಳು. ಕುಟ್ಟನ್ ನಿಜವಾಗಿಯೂ ತುಂಟ, ಮತ್ತು ಅದು ಆ ಹೆಂಗಸಿಗೂ ತಿಳಿದಿತ್ತು.

ಆಮೇಲೆ, ಎಲೆಗಳು ಕಾಣಿಸಿಕೊಂಡವು. ಭೂಮಿಯಿಂದ ಕೆಂಪನೆಯದು ಏನೋ ಹೊರಬಂದಿತು. ಕುಟ್ಟನ್‌ಗೆ ವಿಪರೀತ ಭಯ ಆಯಿತು! ಆದರೆ ಆ ಹೆಂಗಸು ಮತ್ತು ಆಕೆಯ ಮಗಳು ತುಂಬಾ ಸಂತೋಷವಾಗಿದ್ದರು.



ಕುಟ್ಟನ್ ಯೋಚಿಸಿದ, ಅದು ಆಗ ಕೆಂಪಾಗಿತ್ತು, ಈಗ ಹಳದಿಯಾಗಿದೆ. ಆದರೆ ಎರಡೂ ಅದೇ! ಅದರ ಹೆಸರು ಮಾತ್ರ ಯಾಕೆ ನನಗೆ ನೆನಪೇ ಆಗುತ್ತಿಲ್ಲ?

ಕುಟ್ಟನ್ ಗೆ ಏನಾದರೂ ಹೇಳಬೇಕು ಎನಿಸಿತು, "ಇಲ್ಲಿ ಕೇಳಿ ಮೂವರೂ. ಆ ಹೆಂಗಸಿಗೆ ಮಣ್ಣು ಅಂದರೆ ಇಷ್ಟ. ಪ್ರತಿ ವರ್ಷ ಅವಳು ಅದನ್ನು ಅಗೆಯುತ್ತಾಳೆ. ನಂತರ ಅವಳು ಅದರ ಮೇಲೆ ಸಾಕಷ್ಟು ನೀರು ಹಾಕುತ್ತಾಳೆ. ನಾವು ಅದನ್ನು ಅಗೆಯಲು ಪ್ರಯತ್ನಿಸಿದರೆ, ಅವಳು ನಮ್ಮನ್ನು ಓಡಿಸುತ್ತಾಳೆ.



ನಂತರ ಆಕೆ ಸಣ್ಣ ಮಣಿಗಳಂತಹದನ್ನು ಮಣ್ಣಿನಲ್ಲಿ ಹಾಕುತ್ತಾಳೆ.

ಕೆಲವೊಮ್ಮೆ ಬಿಳಿ.

ಕೆಲವೊಮ್ಮೆ ಕಪ್ಪು.

ಆಮೇಲೆ ಏನಾಗುತ್ತದೆ?"

"ಏನು?" ಮರಿಗಳು ಕೂಗಿದವು.

"ಈ ಪುಟ್ಟ ಹಸಿರು ಮನುಷ್ಯರು ಮಣ್ಣಿನಿಂದ ಹೊರಗೆ ಬರುತ್ತಾರೆ. ಅವನ್ನು ಎಲೆಗಳು ಅಂತ ಕರೆಯುತ್ತಾರೆ. ನನ್ನನ್ನು ಕುಟ್ಟನ್ ಎಂದು ಕರೆಯುತ್ತಾರಲ್ಲ, ಹಾಗೆ," ಅವನು ವಿವರಿಸಿದ.

"ಓಹ್! ಆದರೆ ಅದು ನಮಗೆ ಗೊತ್ತು," ಮರಿಗಳು ಹೇಳಿದವು. "ಈ ಹಳದಿ ವಸ್ತು ಏನು? ಏನದು ಹೇಳು **ಪ್ಲೀಸ್ ಸ್ ಸ್ ಸ್!**"

ಕುಟ್ಟನ್ ಗೆ ಸಿಕ್ಕಿಹಾಕಿಕೊಂಡ. ಮುಂದೆ ಏನು ಹೇಳಬೇಕೆಂದು ಅವನಿಗೆ ತೋಚಲಿಲ್ಲ. ಆಗ ಇದ್ದಕ್ಕಿದ್ದಂತೆ ಅವನಿಗೆ ಹೊಳೆಯಿತು.



"ಖುಷಿ!" ಅವನು ಉದ್ಗರಿಸಿದ.

"ಖುಷಿ?" ಬೆಕ್ಕಿನ ಮರಿಗಳು ಅನುಮಾನದಿಂದ ಕೇಳಿದವು.

"ಹೌದು. ನಿಮಗೆ ಅರ್ಥವಾಗುತ್ತಿಲ್ಲವೇ? ಗಾಳಿ ಬೀಸುತ್ತಿರುವಾಗ ಅವು ಎಷ್ಟು ಚೆನ್ನಾಗಿ ಕಾಣುತ್ತವೆ. ಆ ಹಸಿರು ವಸ್ತುಗಳನ್ನು ನೋಡುತ್ತಿದ್ದರೆ ನಮಗೆ ಖುಷಿ ಅನ್ನಿಸುತ್ತದೆ ತಾನೇ?

ಎಲೆಗಳು ಹೊರಗೆ ಬರುವುದನ್ನು ನೋಡಿ ಜನರು ಕೂಡ ಸಂತೋಷಪಡುತ್ತಾರೆ.

ಖುಷಿಯಾಗಿರುವ ಬಾಲಗಳಿಲ್ಲದ ಜನರು ಮತ್ತು ಖುಷಿಯಾಗಿರುವ ಬೆಕ್ಕುಗಳಿಂದಾಗಿ ಎಲೆಗಳೂ ಖುಷಿಯಾಗಿರುತ್ತವೆ.


ಆಮೇಲೆ ಅವು ನಮಗೆ ಈ ಸಣ್ಣಪುಟ್ಟ ಖುಷಿಗಳನ್ನು ಕೊಡುತ್ತವೆ.




ಇದು ಹಳದಿ ಖುಷಿ. ಕಳೆದ ವರ್ಷ ನಾನು ಕೆಂಪು ಖುಷಿಯನ್ನು ನೋಡಿದ್ದೆ. ಎಷ್ಟು ಚೆಂದ ಇವೆ ಅಲ್ವಾ?"

ಈಗ ಮರಿಗಳಿಗೆ ಅರ್ಥವಾಯಿತು. "ಓ ನೋಡು!" "ಜೇನು ನೊಣ ಮತ್ತು ಚಿಟ್ಟೆಗಳಿಗೂ ಅವು ಇಷ್ಟ."

"ಹೌದು ಹೌದು. ಎಲ್ಲರಿಗೂ ಅವು ಇಷ್ಟ!" ಕುಟ್ಟನ್ ಹೇಳಿದ.





"ಯಾವುದು ಇಷ್ಟ?" ಕುಟ್ಟನ್
ಹಿಂದಿನಿಂದ ಒಂದು ದನಿ ಕೇಳಿಸಿತು .
ಅದು ಅಮ್ಮ ಬೆಕ್ಕು.
"ಖುಷಿ" ಪುಟ್ಟ ಮರಿಯೊಂದು
ಉತ್ತರಿಸಿತು.
"ಏನು? ಓಹ್, ಅಂದರೆ ಹೂವಾ?"
ಅಮ್ಮ ಬೆಕ್ಕು ನಕ್ಕಳು.

ಕುಟ್ಟನ್‌ಗೆ ಅಲ್ಲಿಂದ
ಮಾಯವಾಗಿಬಿಡಬೇಕು
ಅನ್ನಿಸಿತು! ಅವನಿಗೆ ತುಂಬಾ
ನಾಚಿಕೆಯಾಯಿತು.
ಅದೊಂದು ಹೂವು! ಅವನು
ಅದನ್ನ ಹೇಗೆ ಮರೆತ?

ಎರಡು ಪುಟ್ಟ ಮರಿಗಳು ಕುಟ್ಟನ್‌ನನ್ನು ಅಣಕಿಸಿ ದೂರ ಹೋದವು. ಆದರೆ ಇನ್ನೊಂದು ಮರಿ ಅಲ್ಲಿಯೇ ಉಳಿದುಕೊಂಡು, “ಬೇಜಾರು ಮಾಡಿಕೊಳ್ಳಬೇಡ. ನೀನು ಹೇಳಿದ್ದು ನನಗೆ ತುಂಬಾ ಇಷ್ಟವಾಯಿತು. ಖುಷಿ ತುಂಬಾ ಒಳ್ಳೆಯ ಹೆಸರು ಅಂತ ನನಗೆ ಅನ್ನಿಸಿತು. ಬಹುಶಃ ನೀನು ಹೇಳಿದ್ದೇ ಸರಿ." ಎಂದು ಹೇಳಿತು. ಕುಟ್ಟನ್‌ಗೆ ಸ್ವಲ್ಪ ಸಮಾಧಾನವಾಯಿತು.

ಬಹುಶಃ ಕೆಲವೊಮ್ಮೆ ಎಲ್ಲರೂ ಸರಿಯಾಗಿರಬಹುದು. ಮತ್ತು ಕೆಲವೊಮ್ಮೆ ಎಲ್ಲರೂ ತಪ್ಪಾಗಿರಬಹುದು. ಅವನಿಗೆ ತಿಳಿದ ಮಟ್ಟಿಗೆ, ಹೂವುಗಳು ಅಂದರೆ ಖುಷಿ.



ಹಾಗೆ ತನ್ನ ಬಗ್ಗೆ, ಆ ಪುಟ್ಟ ಮರಿಯ ಬಗ್ಗೆ, ಖುಷಿಯ ಹೂವುಗಳ ಬಗ್ಗೆ ಖುಷಿಪಡುತ್ತಾ ಕುಟ್ಟನ್ ಹೊರಟ. ಅವನಿಗೆ ಈಗ ತುಂಬಾ ಖುಷಿಯಾಗಿತ್ತು. ಎಷ್ಟು ಖುಷಿಯೆಂದರೆ ತಾನೂ ಮತ್ತೆ ಪುಟ್ಟ ಮರಿಯಾದ ಹಾಗೆ ಅವನಿಗೆ ಅನ್ನಿಸಿತು.



ಸಿರೀನ್ ಕಾಸಿಮ್ ಒಂದು ಸುಂದರ ಸ್ಥಳದಿಂದ ಇನ್ನೊಂದಕ್ಕೆ ಹೋಗುತ್ತಿರುತ್ತಾರೆ, ಮತ್ತು ಸದ್ಯಕ್ಕೆ ಲಂಡನ್‌ನ ಸ್ಕೂಲ್ ಆಫ್ ಓರಿಯಂಟಲ್ ಮತ್ತು ಆಫ್ರಿಕನ್ ಸ್ಟಡೀಸ್‌ನಲ್ಲಿ ದಕ್ಷಿಣ ಏಷ್ಯಾ ಅಧ್ಯಯನ ವಿಷಯದಲ್ಲಿ ಎಂಎ ವ್ಯಾಸಂಗ ಮಾಡುತ್ತಿದ್ದಾರೆ. ಜಗತ್ತನ್ನು ಉಳಿಸುವ ಕನಸು ಕಾಣುತ್ತಾ ಬರೆಯುವುದನ್ನು ಅವರು ಇಷ್ಟಪಡುತ್ತಾರೆ.

ಸೋನಲ್ ಪಾನ್ಸೆ ಮಹಾರಾಷ್ಟ್ರದ ನಾಸಿಕ್ ಮೂಲದ ಸ್ವತಂತ್ರ ಕಲಾವಿದೆ ಮತ್ತು ಬರಹಗಾರ್ತಿ. ಅವರು ವಿವಿಧ ಮಾಧ್ಯಮಗಳಲ್ಲಿ ವಾಸ್ತವಿಕ, ಕಲ್ಪನಾತ್ಮಕ ಮತ್ತು ಅಮೂರ್ತ ಕಲಾಕೃತಿಯನ್ನು ರಚಿಸುತ್ತಾರೆ. ಸೋನಾಲ್ ಚಿತ್ರಗಳು ಭಾರತ, ಆಸ್ಟ್ರೇಲಿಯಾ ಮತ್ತು ಯುನೈಟೆಡ್ ಸ್ಟೇಟ್ಸ್‌ನ ಪ್ರಕಟಣೆಗಳಲ್ಲಿ ಬೆಳಕು ಕಂಡಿವೆ. ಲಂಡನ್ ಮತ್ತು ಮುಂಬಯಿನಲ್ಲಿ ಅವರು ತಮ್ಮ ಚಿತ್ರಗಳನ್ನು ಪ್ರದರ್ಶಿಸಿದ್ದು, ಪ್ರಸ್ತುತ ಒಂದು ಕಾದಂಬರಿ ಬರೆಯುತ್ತಿದ್ದಾರೆ.

KATHA

ಈ ಆವೃತ್ತಿಯನ್ನು ಮೊದಲು 2024
ಕಾಪಿರೈಟ್ © ಕಥಾ, 2024
ಪಠ್ಯದ ಕಾಪಿರೈಟ್ © ಪ್ರಶಾಂತ ಕಾಸಿಂ
ವಿವರಣೆ ಹಕ್ಕುಸ್ವಾಮ್ಯ © ಕಥಾ
ಎಲ್ಲ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. ಈ ಪುಸ್ತಕದ ಯಾವುದೇ ಭಾಗವನ್ನು ಪ್ರಕಾಶಕರ ಪೂರ್ವ ಲಿಖಿತ ಅನುಮತಿಯಿಲ್ಲದೆ ಯಾವುದೇ ರೂಪದಲ್ಲಿ ಮರು ಬಳಕೆ ಮಾಡುವಂತಿಲ್ಲ ಅಥವಾ ಬಳಸುವಂತಿಲ್ಲ.
ನವದೆಹಲಿಯಲ್ಲಿ ಮುದ್ರಿಸಲಾಗಿದೆ
ಐಎಸ್ ಬಿಎನ್ 978-93-94185-93-7

ನಮ್ಮ ಧ್ಯೇಯ: ಪ್ರತಿಯೊಂದು ಮಗುವೂ ಖುಷಿಗಾಗಿ ಮತ್ತು ಅರ್ಥಕ್ಕಾಗಿ ಓದಬೇಕು!
ಕಥಾ ಎಂಬುದು ಒಂದು ನೋಂದಾಯಿತ ಲಾಭ ರಹಿತ ಸಂಸ್ಥೆ. ಈ ಪುಸ್ತಕವು 300 ಮಿಲಿಯನ್ ಸಿಟಿಜನ್ಸ್ ಚಾಲೆಂಜ್‌ನ ಕೃತಿಯಾಗಿದೆ.
ಭಾರತದಲ್ಲಿ 300 ಮಿಲಿಯನ್ ಶಾಲೆಗೆ ಹೋಗುವ ಮಕ್ಕಳು ಹೊಸ ಕಲಿಕೆಯ ವಿಧಾನಗಳೊಂದಿಗೆ ಗ್ರೇಡ್ ಮಟ್ಟದ ಓದುವಿಕೆಯನ್ನು ಸಾಧಿಸಲು ನಾವು ಸಹಾಯ ಮಾಡುತ್ತೇವೆ.
ದೆಹಲಿ ವಿಳಾಸ: A3, ಸರ್ವೋದಯ ಎನ್ಕ್ಲೇವ್, ಶ್ರೀ ಅರಬಿಂದೋ ಮಾರ್ಗ, ನವದೆಹಲಿ 110 017
ಚೆನ್ನೈ ವಿಳಾಸ: 6, ಪಾಪನಾಸಂ ಶಿವನ್ ಸಲೈ, ಮೈಲಾಪುರ, ಚೆನ್ನೈ 600 004
ದೂರವಾಣಿ: ದೆಹಲಿ: +91 11 4182 9998 | ಚೆನ್ನೈ: +91 98400 30073
ಇಮೇಲ್: books@katha.org
ವೆಬ್‌ಸೈಟ್: www.katha.org | books.katha.org | learn.katha.org

ಈ ಪುಸ್ತಕದಿಂದ ಬರುವ ಲಾಭವು ಕಥಾ ಶಾಲೆಗಳಲ್ಲಿ ಕಲಿಯುವ ಮಕ್ಕಳ ಗುಣಮಟ್ಟದ ಶಿಕ್ಷಣವನ್ನು ಬೆಂಬಲಿಸುತ್ತದೆ.

ನಮ್ಮ ಪುಸ್ತಕಗಳನ್ನು ಮುದ್ರಿಸಿದ ಕಾಗದವನ್ನು ತಯಾರಿಸಲು ಬಳಸುವ ಮರವನ್ನು ಬದಲಿಸಲು ಕಥಾ ನಿಯಮಿತವಾಗಿ ಮರಗಳನ್ನು ನೆಡುತ್ತದೆ




ಐ ಲವ್ ರೀಡಿಂಗ್ ಸರಣಿಯು ಪುಸ್ತಕಗಳ ಒಂದು ಅನನ್ಯ ಸಂಗ್ರಹವಾಗಿದ್ದು ಅದು ಮೊದಲ ತಲೆಮಾರಿನ ಓದುಗರನ್ನು ಮನರಂಜನೆ ಮತ್ತು ಅರ್ಥಪೂರ್ಣ ಓದಿನ ಲೋಕಕ್ಕೆ ಸೆಳೆಯುತ್ತದೆ. ಈ ಸರಣಿಯಲ್ಲಿನ ಪುಸ್ತಕಗಳು, ಅವುಗಳ ಉನ್ನತ ಗುಣಮಟ್ಟದ ವಿಷಯ ಮತ್ತು ವಿನ್ಯಾಸದೊಂದಿಗೆ, ಮಕ್ಕಳ ಕಲಿಕೆಯ ಅಗತ್ಯಗಳಿಗೆ ಹೊಂದಿಕೆಯಾಗುತ್ತವೆ. ನಾವು ಭಾರತದ 2000 ವರ್ಷಗಳ ಸಾಹಿತ್ಯ ಪರಂಪರೆಯ ಅತ್ಯುತ್ತಮವಾದವುಗಳನ್ನು ನಿಮ್ಮ ಮುಂದೆ ತರುತ್ತೇವೆ, ಶಾಸ್ತ್ರೀಯದಿಂದ ಆಧುನಿಕತೆಯವರೆಗೆ ಹಂಚಿಕೊಂಡ ಮತ್ತು ಮಾರ್ಗದರ್ಶನದ ಓದುವಿಕೆಗಾಗಿ, ಎಲ್ಲವನ್ನೂ ಕೈಗೆಟುಕುವ ಬೆಲೆಯಲ್ಲಿ - ಓದುವಿಕೆ ಮತ್ತು ಶಿಕ್ಷಣವನ್ನು ಪ್ರಜಾಪ್ರಭುತ್ವಗೊಳಿಸುವ ಕಥಾ ಅವರ ಒಂದು ವಿಶಿಷ್ಟ ವಿಧಾನ!